ಅ) ಈ ನೀಡುತ್ತಿರುವ ಮಾಹೆಯಾನ ಕಲಾವಿದರ 250-00 ರೂ.ಗಳ ಮಾಸಾಶನ ಧನವನ್ನು ಹೆಚ್ಚಿಸುವ ಯೋಜನೆ ಸರ್ಕಾರದ ಮುಂದಿದೆಯೇ ಈ ಮಾಸಾಶನವನ್ನು ಹೆಚ್ಚಿಸಲು ಕೈಗೊಳ್ಳುವ ಕ್ರಮವೇನು?

ಇ) ಪ್ರಸಕ್ತ ಸಾಲಿನಲ್ಲಿ ಕಲಾವಿದರ ಮಾಸಾಶನ ಪಡೆಯಲು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು) :—

ಅ) ಒಟ್ಟು 76 ಮಂದಿ.

ಆ) ಸಾಹಿತ್ಯ, ಸಂಗೀತ, ಹರಿಕಥೆ, ಸುಗಮ ಸಂಗೀತ, ಗಮಕ ಕಲೆ, ರಂಗಭೂಮಿ, ಜಾನಪದ ಕಲೆ, ಯಕ್ಷಗಾನ, ಲಲಿತಕಲೆ, ಹಾಗೂ ಶಿಲ್ಪಕಲೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಅಶಕ್ತ ಕಲಾವಿದರಿಗೆ ಮಾಸಾಶನ ನೀಡಲಾಗುತ್ತದೆ.

ಇ) ಅ) ಇದೆ
ಆ) ಪರಿಶೀಲನೆಯಲ್ಲಿದೆ

ಇ) ಒಟ್ಟು 292

ಶ್ರೀ ಸಿ. ಚೆನ್ನಿಗಪ್ಪ :— ಅಧ್ಯಕ್ಷರೇ, ಕನ್ನಡನಾಡು ಸಂಸ್ಕೃತಿ ಮತ್ತು ಕಲೆಗೆ ಹೆಸರುವಾಸಿಯಾದ ನಾಡು. ಪ್ರಪಂಚದಲ್ಲಿ ಯಾವುದೇ ವ್ಯಕ್ತಿ ತನ್ನ ದುಃಖ ಮತ್ತು ಅಸಂತೋಷವನ್ನು ಮರೆತು ಅವನು ಜೀವನದಲ್ಲಿ ಉತ್ತಮವಾಗಿ ನಡೆಯುವಂತಹ ರೀತಿಯಲ್ಲಿ ಕನ್ನಡ ಸಂಸ್ಕೃತಿ ಬೆಳೆದಿದೆ. ರಾಜ್ಯದಲ್ಲಂತೂ ಕನ್ನಡಕ್ಕೆ ಹೆಚ್ಚು ಪ್ರಾತಿನಿಧ್ಯ ಕೊಟ್ಟು ಅಭಿವೃದ್ಧಿ ಸಾಧಿಸಿದ್ದಾರೆ. ಆದರೆ ಕಲಾವಿದರಿಗೆ ಕೊಡುವ ಮಾಸಾಶನ ಕೊಟ್ಟು ಅದರಲ್ಲೂ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿರುವ ಕಲಾವಿದರಿಗೆ ಎಷ್ಟು ಜನಕ್ಕೆ ನೀಡಲಾಗಿದೆ?

ಶ್ರೀಮತಿ ರಾಣಿ ಸತೀಶ್ :— ಅಧ್ಯಕ್ಷರೇ, ಆ ಅಂಕಿಅಂಶಗಳನ್ನು ಸದಸ್ಯರಿಗೆ ನಾನು ಉತ್ತರದಲ್ಲಿ ಒದಗಿಸಿದ್ದೇನೆ. ಅದನ್ನು ಅವರು ಪರಿಶೀಲಿಸಬಹುದು.

*ಧಾರವಾಡ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಸ್ವಂತ ಕಟ್ಟಡ.*

242(3398) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ, (ಧಾರವಾಡ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾರಂಭದ ವರ್ಷ ಯಾವುದು ಇಲ್ಲಿ ವಿದ್ಯಾರ್ಥಿಗಳಿಗೆ ಯಾವ ಬ್ರ್ಯಾಂಡ್ (ಟ್ರೇಡ್)ಗಳಲ್ಲಿ ತರಬೇತಿ ಕೊಡುತ್ತಿದೆ ಮತ್ತು ಪ್ರತಿಯೊಂದು ಟ್ರೇಡ್‌ನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ವಿವರ ತಿಳಿಸುವುದು.

ಆ) ಹುಬ್ಬಳ್ಳಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಎಷ್ಟು; ಯಾವ ಯಾವ ಟ್ರೇಡ್‌ಗಳು ಪ್ರತಿಯೊಂದು ಸಂಸ್ಥೆಗಳಲ್ಲಿ ಇವೆ; ಪ್ರತಿ ಬ್ರ್ಯಾಂಚ್‌ನ ವಿದ್ಯಾರ್ಥಿಗಳ ಸಂಖ್ಯೆ ತಿಳಿಸಲಾಗುವುದೇ;

ಇ) ಪ್ರತಿಯೊಂದು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿಗೆ ಅವಶ್ಯಕವಾದ ಯಂತ್ರೋಪಕರಣಗಳು ಇವೆಯೇ; ವಿವರ ತಿಳಿಸುವುದು

ಈ) ಧಾರವಾಡದ ತರಬೇತಿ ಸಂಸ್ಥೆಯಲ್ಲಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಮುಂಬರುವ ಪರಣತಿಯ ಬೇಡಿಕೆಯ ಪ್ರಕಾರ ಹೊಸ ಬ್ರ್ಯಾಂಚ್‌ಗಳನ್ನು ಪ್ರಾರಂಭಿಸುವ ಯೋಜನೆ ಇದೆಯೇ;

ಉ) ಧಾರವಾಡ ತರಬೇತಿ ಸಂಸ್ಥೆಗೆ ಉತ್ತಮವಾದ ಸ್ವಂತ ಕಟ್ಟಡದ ಅವಶ್ಯಕತೆ ಇರುವುದಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

ಅ) 1. ಪ್ರಾರಂಭದ ವರ್ಷ 1999.

2.

| ಕ್ರಮ ಸಂಖ್ಯೆ | ನಿವೃತ್ತಿ | ಹಿರಿಯ | ಕಿರಿಯ | ಒಟ್ಟು |
|---|---|---|---|---|
| 1. | ಎಲೆಕ್ಟ್ರೀಷಿಯನ್ | 16 | 16 | 32 |
| 2. | ಫಿಟ್ಟರ್ | 16 | 16 | 32 |
| 3. | ಎಲೆಕ್ಟ್ರಾನಿಕ್ ಮೆಕ್ಯಾನಿಕ್ | 16 | 16 | 32 |
| 4. | ಎಮ್.ಆರ್.ಎ.ಸಿ. | 16 | 16 | 32 |
| | ಒಟ್ಟು | 64 | 64 | 128 |

ಆ) 1. ಒಂದು

2. ಟ್ರೇಡ್ ಮತ್ತು ವಿದ್ಯಾರ್ಥಿಗಳ ವಿವರಗಳನ್ನು ಅನುಬಂಧ -1ರಲ್ಲಿ ಲಗತ್ತಿಸಲಾಗಿದೆ.

ಇ) ಡಿ.ಜಿ.ಇ.ಟಿ. ನ್ಯೂಡೆಲ್ಲಿ ಸ್ಟಾಂಡರ್ಡ್ ಲಿಸ್ಟ್ ಪ್ರಕಾರ ಪ್ರಾಯೋಗಿಕ ತರಬೇತಿ ನೀಡಲು ಅಗತ್ಯವಿರುವ ಯಂತ್ರೋಪಕರಣಗಳನ್ನು ಖರೀದಿಸಿ ಒದಗಿಸಲಾಗಿದೆ.

ಈ) - ಸದ್ಯಕ್ಕೆ ಇಲ್ಲ -

ಉ) ಪ್ರಾಥಮಿಕವಾಗಿ 5 ಎಕರೆ ಜಮೀನನ್ನು ಕೇವಲ 2 ತಿಂಗಳ ಹಿಂದೆ ಸ್ವಾಧೀನಪಡಿಸಿಕೊಳ್ಳಲಾಗಿದ್ದು ಕಟ್ಟಡ ನಿರ್ಮಾಣದ ರೂಪುರೇಷೆಗಳು ನಿರ್ಧರಿತವಾದ ನಂತರ ಅನುದಾನದ ಲಭ್ಯತೆಯ ಮೇರೆಗೆ ಕಟ್ಟಡ ನಿರ್ಮಾಣವನ್ನು ಕೈಗೊತ್ತಿಕೊಳ್ಳಲಾಗುವುದು.

ANNEXURE -1

**ITI HUBLI**

| No. | TRADES | Sanctioned Strength | | | | |
|---|---|---|---|---|---|---|
| | | JUNIOR | Units | SENIOR | Units | TOTAL |
| 1. | Diesel Mechanic | 32 | 2 | | | 32 |
| 2. | Sheet Metal Worker | 32 | 2 | | | 32 |
| 3. | Welder | 48 | 2 | | | 48 |
| 4. | COPA | 20 | 1 | | | 20 |
| 5. | Stenography | 16 | 1 | | | 16 |
| 6. | Secretarial Practice | 16 | 1 | | | 16 |
| 7. | D M M | 16 | 1 | 16 | 1 | 32 |
| 8. | D M C | 16 | 1 | 16 | 1 | 32 |
| 9. | Electrician | 48 | 3 | 48 | 3 | 96 |
| 10. | Fitter | 64 | 4 | 64 | 4 | 128 |
| 11. | Electronic Mechanic | 32 | 2 | 16 | 2 | 48 |
| 12. | Mechinist | 24 | 2 | 24 | 2 | 48 |
| 13. | Mechanic Motor Vehicle | 16 | 1 | 16 | 1 | 32 |
| 14. | Turner | 36 | 3 | 36 | 3 | 72 |
| 15. | Mechinist Grinder | 12 | 1 | 12 | 1 | 24 |
| 16. | MRCA | 32 | 2 | 32 | 2 | 64 |
| 17. | IT & ESM | 16 | 1 | | 1 | 16 |
| | Total | 476 | 32 | 280 | 21 | 756 |

ಶ್ರೀ ಚಂದ್ರಕಾಂತ ಬೆಲ್ಲದ್ :— ಅಧ್ಯಕ್ಷರೇ ಇವತ್ತು ನಾವು ಐಟಿಐಗಳಿಗೆ ಹೆಚ್ಚು ಪ್ರಾತಿನಿಧ್ಯ ಕೊಡಬೇಕಾಗಿದೆ. ಇವತ್ತಿನ ವಿದ್ಯಾರ್ಥಿಗಳಿಗೆ ಈ ಕಡೆಗೇ ಒಲವುಳ್ಳವರು. ಇದರಿಂದ ಸ್ವತಂತ್ರವಾಗಿ ಕೆಲಪ್ರಾಸಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಧಾರವಾಡದಲ್ಲಿ ಶುರು ಮಾಡಿದ ಸರ್ಕಾರಿ ತರಬೇತಿ ಸಂಸ್ಥೆಗೆ ಹೆಚ್ಚಿನ ಬ್ರಾಂಡ್‌ಗಳನ್ನು ಕೂಡಿಸಬೇಕು. ಬೇಲೂರಿನಂತಹ ದೊಡ್ಡ ಕೈಗಾರಿಕಾ ಎಸ್ಟೇಟ್ ಧಾರವಾಡದಲ್ಲಿದ್ದು ಐಟಿಐನಿಂದ ತರಬೇತಿ ಪಡೆದು ಬರುವ ವಿದ್ಯಾರ್ಥಿಗಳು ಸ್ವತಂತ್ರವಾಗಿ ಕಾಯಕ ಮಾಡಲು ಅವಕಾಶ ಸಿಗುತ್ತದೆ. ಅದಕ್ಕಾಗಿ ಅಲ್ಲಿ ಈಗಾಗಲೇ ಜಾಗ ಪಡೆದುಕೊಳ್ಳಲಾಗಿದೆ. ಅದೂ ಕೈಗಾರಿಕಾ ಎಸ್ಟೇಟ್‌ಗೆ ಹೋಗುವ ಮಾರ್ಗದಲ್ಲೇ ಇದೆ. ಅದಕ್ಕೆ ಹಣ ಕೊಟ್ಟು ಸ್ವತಂತ್ರ ಕಟ್ಟಡ ಅಲ್ಲಿ ಮಾಡಿಕೊಡಬೇಕೆಂದು ವಿನಂತಿ.

ಶ್ರೀ ಎ.ಎಂ. ಹಿಂಡಸಗೇರಿ :— ಅಧ್ಯಕ್ಷರೇ, ಬೆಲ್ಲದ್‌ರವರು ಧಾರವಾಡದಲ್ಲಿ ನಾವು ಐಟಿಐ ಸ್ಥಾಪಿಸಿದ್ದು ಮತ್ತು ಜಾಗ ಕೊಟ್ಟಿದ್ದರ ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಕಟ್ಟಡವನ್ನು ತುರ್ತಾಗಿ ಕಟ್ಟಿಸಿಕೊಡಬೇಕೆಂದಿದ್ದಾರೆ. ನಮ್ಮ ಆರ್ಥಿಕ ಪರಿಸ್ಥಿತಿ ನೋಡಿ ಮುಂಬರುವ ದಿವಸದಲ್ಲಿ ಅದನ್ನು ಮಾಡಿಕೊಡಲು ನಾನು ಪ್ರಯತ್ನ ಮಾಡುವೆನು. ಅಲ್ಲದೆ ಬೇರೆ ಟ್ರೇಡ್‌ಗಳನ್ನು ಕೊಡಬೇಕೆಂದು ಅವರು ಕೇಳಿದ್ದಾರೆ. ಅಲ್ಲಿ ಮೂರು ಟ್ರೇಡನ್ನು 128 ವಿದ್ಯಾರ್ಥಿಗಳಿಗೆ ನಾವು ಕೊಟ್ಟಿದ್ದೇವೆ. ಪಕ್ಕದ ಹುಬ್ಬಳ್ಳಿಯಲ್ಲೇ 17 ಟ್ರೇಡ್ಸ್ ಇವೆ. 756 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಧಾರವಾಡದಲ್ಲೂ ಹೆಚ್ಚಿಗೆ ಕೊಡಬೇಕೆಂಬುದನ್ನು ಪ್ರಯತ್ನ ಮಾಡುತ್ತೇನೆ. ಈಗ ಎಂಪವರ್ ಕಮಿಟಿ 15 ಐಟಿಐಗಳ ಬಗ್ಗೆ ಶಿಫಾರಸ್ ಮಾಡಿದೆ. ಕೋಲಾರ, ಭದ್ರಾವತಿ, ದಾವಣಗೆರೆ, ಬೆಂಗಳೂರು, ಮೈಸೂರು, ಹಾಸನ, ಹುಬ್ಬಳ್ಳಿ, ಬೆಳಗಾಂ, ಬಿಜಾಪುರ, ಗದಗ, ನಳಂದವಾಡ, ಬಾಗಲಕೋಟಿ, ದಾಂಡೇಲಿ, ಹೊಳೆನರಸೀಪುರ ಮತ್ತು ಹೂವಿನಹಡಗಲಿ ಈ 15 ಐಟಿಐಗಳಲ್ಲಿ 577 ವಿದ್ಯಾರ್ಥಿಗಳಿಗೆ ಐಟಿಐ ತರಬೇತಿ ಸಿಗುವುದು. ಬೆಲ್ಲದ್ ರವರು ಹೇಳಿದಂತೆ ಧಾರವಾಡದಲ್ಲೂ ತೆಗೆಯಲು ಪರಿಶೀಲಿಸುವೆವು.

ಶ್ರೀ ಚಂದ್ರಕಾಂತ ಬೆಲ್ಲದ್ :— ಬಹಳ ವರ್ಷದ ಬೇಡಿಕೆಯಿಂದ ಧಾರವಾಡದಲ್ಲಿ ಶುರುವಾಗಿದೆ. 75ರಿಂದ ನಾನು ಶಾಸಕನಾಗಿದ್ದಾಗಿನಿಂದ ಕೇಳಿಕೊಂಡು ಬಂದದ್ದು, 99ರಲ್ಲಿ ಇದು ಶುರುವಾಗಿದೆ. ಮೊದಲೊಂದು ಬಂದಿತ್ತು. ಅದು ಕಲಘಟಗಿಗೆ ವರ್ಗಾವಣೆಯಾಗಿ ಹೋಯಿತು. ಆಮೇಲೆ ಒತ್ತಾಯ ಮಾಡಿ ಈಗ ಬಂದಿದೆ. ಬೆಂಗಳೂರು ನಂತರ ಧಾರವಾಡವನ್ನು ದೊಡ್ಡ ಇಂಡಸ್ಟ್ರಿಯಲ್ ಏರಿಯಾ ಮಾಡಬೇಕೆಂದು ಪ್ರಯತ್ನಿಸಿ ಸರ್ಕಾರ ಬೇಲೂರು ಕೈಗಾರಿಕಾ ಎಸ್ಟೇಟ್ ಸ್ಥಾಪಿಸಿದೆ. ಮಹಿಳೆಯರಿಗೂ ಉದ್ಯೋಗ ಸಿಗುವಂತೆ ಟೆಕ್ನಾಲಜಿ ಪಾರ್ಕ್‌ಅನ್ನು ಮಾಡಲಾಗುತ್ತಿದೆ. ಆದ್ದರಿಂದ ಉಳಿದ ಟ್ರೇಡ್‌ಗಳ ಅವಶ್ಯಕತೆಯೂ ಇಲ್ಲಿದೆ. ಆದ್ದರಿಂದ ಹೊಸ ಟ್ರೇಡ್‌ಗಳಿಗೂ ಅವಕಾಶವಾಗಬೇಕು ಈ ವರ್ಷವೇ ಹೊಸ ಕಟ್ಟಡವನ್ನೂ ಮಾಡಿಸಿಕೊಡಬೇಕು.

ಶ್ರೀ ಎ.ಎಂ. ಹಿಂಡಸಗೇರಿ :— ಆಗಲೇ ನಾನು ಹೇಳಿದಂತೆ ಜಮೀನನ್ನು ನಾವು ಖರೀದಿಸಿದ್ದೇವೆ. ಒಳ್ಳೆಯ ಜಮೀನು. ಬೇಲೂರು ಕೈಗಾರಿಕಾ ಎಸ್ಟೇಟಿನ ಮಧ್ಯದಲ್ಲೇ ಇದೆ. ಅವರ ಕಳಕಳಿ ನನಗೆ ಗುರುತಿದೆ. ಹಿಂದೆ ನನ್ನ ಭೇಟಿಯಾದಾಗಲೂ ಹೇಳಿದ್ದಾರೆ.

ಅಧ್ಯಕ್ಷರು :— ಪ್ರಶ್ನೋತ್ತರ ಮುಗಿಯಿತು.

**(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

ಅಧ್ಯಕ್ಷರು :— ಈಗ 17ನೇ ಪಟ್ಟಿಯ ತಡೆಹಿಡಿಯಲಾದ ಪ್ರಶ್ನೆಗಳು.

ಶ್ರೀ ಎ. ಕೃಷ್ಣಪ್ಪ (ಸಕ್ಕರೆ ಸಚಿವರು) :— ಅಧ್ಯಕ್ಷರೇ, 17ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 121 ಪ್ರಶ್ನೆಗಳ ಪೈಕಿ 103 ಉತ್ತರಗಳನ್ನು ಸದನದಲ್ಲಿ ಮಂಡಿಸಿದ್ದೇನೆ.

*ಸುಳ್ಯ ವಿಧಾನಸಭಾ ಕ್ಷೇತ್ರವ್ಯಾಪ್ತಿಗೆ ಮರು ಡಾಂಬರೀಕರಣ.*

2181(3235)ಶ್ರೀ ಎಸ್. ಅಂಗಾರ (ಸುಳ್ಯ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಸುಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಸಂಬಂಧಪಟ್ಟ ಉಪ್ಪಿನಂಗಡಿ ಕಡಬ ಸುಬ್ರಹ್ಮಣ್ಯ ರಸ್ತೆಯ ಮಧ್ಯ ಹೊಂಡ ಗುಂಡಿಗಳು ಬಿದ್ದಿರುವುದಲ್ಲದೆ ಎರಡು ಪಕ್ಕದಲ್ಲಿರುವ ಗುಂಡಿಗಳು ಬಿದ್ದಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಇದರ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು;

2. ಈ ರಸ್ತೆಗೆ ಎಷ್ಟು ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿದೆ; ಮರುಡಾಂಬರೀಕರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದರೆ ಎಂದು ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1. ಈ ಪ್ರದೇಶದಲ್ಲಿ ಸತತವಾಗಿ ಸುರಿಯುತ್ತಿರುವ ಮಳೆಯಿಂದ ಉಪ್ಪಿನಂಗಡಿ (ರಾಷ್ಟ್ರೀಯ ಹೆದ್ದಾರಿ ೪೮ ಕಿ.ಮೀ. ೨೯೮.೦೦ರಿಂದ) ಕಡಬ ಸುಬ್ರಹ್ಮಣ್ಯ ಲೋಕೋಪಯೋಗಿ ಇಲಾಖೆ ರಸ್ತೆಯ ಮಧ್ಯೆ ಹೊಂಡ ಗುಂಡಿಗಳು ಹಾಗೂ ರಸ್ತೆಯ ಎರಡು ಪಕ್ಕದಲ್ಲಿ ಗುಂಡಿಗಳು ಬಿದ್ದಿದ್ದು ಈಗಾಗಲೇ ಗಮನಕ್ಕೆ ಬಂದಿದ್ದು ರಸ್ತೆ ಮಧ್ಯೆದಲ್ಲಿರುವ ಹೊಂಡ ಗುಂಡಿಗಳನ್ನು ಮುಚ್ಚಲು ಈಗಾಗಲೇ ಕ್ರಮ ಕೈಗೊಂಡಿದ್ದು, ಜುಲೈ ೨೦೦೧ ರ ಅಂತ್ಯದ ಒಳಗೆ ದುರಸ್ತಿ ಕಾರ್ಯವನ್ನು ಮುಗಿಸಲಾಗುವುದು.